## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:–** ತಡವಾಗಿ ಪಾವತಿಯಾದ ಪಿಂಚಣಿ, ಉಪದಾನ ಮತ್ತು ರಜೆ ನಗದೀಕರಣ ಇವುಗಳ ಮೇಲೆ ಬಡ್ಡಿ ನೀಡುವ ಬಗ್ಗೆ.

**ಓದಲಾಗಿದೆ:–**1) ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 199 ಪಿಇಎನ್ 93, ದಿನಾಂಕ: 13.09.1994

2) ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 92 ಪಿಇಎನ್ 95, ದಿನಾಂಕ: 17.06.1995

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರಿ ಆದೇಶ ಕ್ರಸಂ. (1) ಮತ್ತು (2) ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ ನಿವೃತ್ತ ಸರ್ಕಾರಿ ನೌಕರರಿಗೆ ಅಥವಾ ಅವರು ಸೇವೆಯಲ್ಲಿರುವಾಗ ಮರಣ ಹೊಂದಿದಲ್ಲಿ ಮತ್ತು ನಿವೃತ್ತಿಯ ನಂತರ ಮರಣ ಹೊಂದಿದಲ್ಲಿ ಅವರ ಕುಟುಂಬಕ್ಕೆ ಲಭ್ಯವಾಗುವ ನಿವೃತ್ತಿ ವೇತನ /ಮರಣೋತ್ತರ ಸೌಲಭ್ಯಗಳಿಗೆ ವಾರ್ಷಿಕ 12% ರಂತೆ ಬಡ್ಡಿಯನ್ನು ಮಂಜೂರು ಮಾಡಲಾಗಿತ್ತು. ಅನೇಕ ಕಾರಣಗಳಿಂದಾಗಿ ಇತ್ತೀಚಿಗಿನ ವರ್ಷಗಳಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಬಡ್ಡಿಯ ದರವು ಬಹಳಷ್ಟು ಕೆಳಗಿಳಿದಿರುತ್ತದೆ. ನಿಶ್ಚಿತ ಠೇವಣಿಗಳ ಮೇಲೆ ಬ್ಯಾಂಕುಗಳು ಮತ್ತು ಸಾಮಾನ್ಯ ಭವಿಷ್ಯ ನಿಧಿಯ ಮೇಲೆ ಸರ್ಕಾರವು ವಿಧಿಸುತ್ತಿರುವ ಬಡ್ಡಿಯ ದರವು ವಾರ್ಷಿಕ 12% ರಿಂದ 8% ಗೆ ಇಳಿದಿರುತ್ತದೆ. ಈ ಪರಿಸ್ಥಿತಿಯಲ್ಲಿ ವಿಳಂಬವಾಗಿ ಪಾವತಿಸಲ್ಪಡುವ ನಿವೃತ್ತಿ/ಮರಣೋತ್ತರ ಸೌಲಭ್ಯಗಳ ಮೇಲೆ ನಿಗದಿಪಡಿಸಲಾದ ವಾರ್ಷಿಕ ಬಡ್ಡಿಯ ದರವನ್ನು 12% ರಂತೆ ಸರ್ಕಾರವು ಪಾವತಿಸುತ್ತಿರುವುದನ್ನು ಮುಂದುವರಿಸುವುದು ನ್ಯಾಯಸಮ್ಮತವಾಗಿರುವುದಿಲ್ಲ. ಈ ಪರಿಸ್ಥಿತಿಯಲ್ಲಿ ವಿಳಂಬವಾಗಿ ಪಾವತಿಸಲ್ಪಡುವ ನಿವೃತ್ತಿ ವೇತನ/ಮರಣೋತ್ತರ ಸೌಲಭ್ಯಗಳಿಗೆ ಹಾಲಿ ಚಾಲ್ತಿಯಲ್ಲಿರುವ ಬಡ್ಡಿಯ ದರವನ್ನು ವಾರ್ಷಿಕ 12% ರಿಂದ 8% ಗೆ ಇಳಿಸಿ ಪರಿಷ್ಕರಿಸುವುದು ಸಮಂಜಸವೆಂಬುದನ್ನು ನಿರ್ಧರಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಇ(ವಿ) 1 ಪಿಇಎನ್ 03. ಬೆಂಗಳೂರು. ದಿನಾಂಕ: 21–08–2003**

1. ಮೇಲಿನ ಪ್ರಸ್ತಾವನೆಯಂತೆ ಮತ್ತು ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 199 ಪಿಇಎನ್ 93 ದಿನಾಂಕ: 13.09.1994ನ್ನು ಭಾಗಶ: ಪರಿಷ್ಕರಿಸಿ ವಿಳಂಬವಾಗಿ ಪಾವತಿಸಲ್ಪಡುವ ನಿವೃತ್ತಿ ವೇತನ/ಮರಣೋತ್ತರ ಸೌಲಭ್ಯಗಳ ಮೇಲೆ ವಿಧಿಸಲಾಗುವ ಬಡ್ಡಿಯ ದರವನ್ನು ಈ ತಕ್ಷಣದಿಂದಲೇ ಜಾರಿಗೆ ಬರುವಂತೆ ವಾರ್ಷಿಕ 8%ಗೆ ನಿಗಧಿಪಡಿಸಿ ಮಂಜೂರಾತಿ ನೀಡಲಾಗಿದೆ.

2. ಈ ಸರ್ಕಾರಿ ಆದೇಶದ ದಿನಾಂಕ:21–08–2003 ರ ಮೊದಲು ನಿವೃತ್ತಿ ಹೊಂದಿದ ನಿವೃತ್ತಿದಾರರ ನಿವೃತ್ತಿ ಸೌಲಭ್ಯಗಳು ಪಾವತಿಯಾಗದೇ ಉಳಿದಿದ್ದು ಅಥವಾ ದಿನಾಂಕ: 21–08–2003 ರ ನಂತರ ಪಾವತಿಯಾದ ನಿವೃತ್ತಿದಾರರ ನಿವೃತ್ತಿ ವೇತನ ಪ್ರಕರಣಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 864 ಪಿಇಎನ್ 84. ದಿನಾಂಕ:14–08–1985 ಮತ್ತು ಸಂಖ್ಯೆ:ಆಇ (ವಿಶೇಷ) 260 ಪಿಇಎನ್ 86 ದಿನಾಂಕ:4–06–1986 ಗಳಲ್ಲಿ ನಿಗದಿಪಡಿಸಿರುವ ಬಡ್ಡಿಯ ದರದಲ್ಲಿ ದಿನಾಂಕ:12–09–1994 ರ ವರೆಗೆ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 199 ಪಿಇಎನ್ 93 ದಿನಾಂಕ: 13.09.1994 ಮತ್ತು ಸರ್ಕಾರಿ ಆದೇಶ ಸಂಖ್ಯೆ:ಆಇ(ವಿಶೇಷ) 92/ಪಿಇಎನ್ /95,ದಿನಾಂಕ: 17–06–1995 ಗಳಲ್ಲಿ ನಿಗಧಿಪಡಿಸಿರುವ ದರದಲ್ಲಿ ಅನ್ವಯಿಸುವ ಬಡ್ಡಿಯನ್ನು ದಿನಾಂಕ:13–09–1994 ರಿಂದ ದಿನಾಂಕ: 20–08–2003 ರ ವರೆಗಿನ ಅವಧಿಗೆ ಲೆಕ್ಕ ಹಾಕಿ ಪಾವತಿ ಮಾಡತಕ್ಕದ್ದು.

3. ಸರ್ಕಾರಿ ಆದೇಶ ಸಂಖ್ಯೆ: ಆಇ (ವಿಶೇಷ) 199 ಪಿಇಎನ್ 93 ದಿನಾಂಕ: 13.09.1994 ರಲ್ಲಿ ನಿಗದಿಪಡಿಸಿದ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಮತ್ತು ಈಗಾಗಲೇ ಪಾವತಿಯಾಗಿ ದಿನಾಂಕ: 21-08-2003 ರ ಒಳಗಾಗಿ ನಿವೃತ್ತಿ ಹೊಂದಿ ಮೇಲಿನ ಪ್ಯಾರಾ 2ರ ಅನ್ವಯ ಮುಕ್ತಾಯಗೊಂಡ ನಿವೃತ್ತಿ ವೇತನದ ಪ್ರಕರಣಗಳಿಗೆ ಈ ಪರಿಷ್ಕೃತ ಬಡ್ಡಿಯ ದರವು ಅನ್ವಯಿಸುವುದುಲ್ಲ. ಮತ್ತು ಹಾಗೂ ಅಂತಹ ಪ್ರಕರಣಗಳನ್ನು ಪುನರ್‌ಪರಿಗಣಿಸಲಾಗದೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಸಹಿ/-
(ಕೆ.ಕೆ. ನಾಯಕ್)
ವಿಶೇಷಾಧಿಕಾರಿ (ವಿಶ್ರಾಂತಿ ವೇತನ)
ಆರ್ಥಿಕ ಇಲಾಖೆ.

ಇವರಿಗೆ:

1) ಸಂಕಲನಕಾರರು, ಕರ್ನಾಟಕ ಗೆಜೆಟ್ ಮುಂದಿನವಾರದ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ
2) ಮಹಾಲೇಖಾಪಾಲರು (ಲೆಕ್ಕ/ಆಡಿಟ್) ಕರ್ನಾಟಕ ಬೆಂಗಳೂರು.
3) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು: ಸರ್ಕಾರದ ಕಾರ್ಯದರ್ಶಿಗಳು.
4) ಎಲ್ಲಾ ಇಲಾಖಾ ವಿಶೇಷ ಅಪರ: ಜಂಟಿ ಕಾರ್ಯದರ್ಶಿಗಳು
5) ಖಜಾನೆ ನಿರ್ದೇಶಕರು, ಬೆಂಗಳೂರು.
6) ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು,
7) ರಾಜ್ಯದ ಎಲ್ಲಾ ವಿಭಾಗಾಧಿಕಾರಿಗಳು
8) ನಿಯಂತ್ರಕರು ರಾಜ್ಯ ಲೆಕ್ಕ ಪತ್ರ ಇಲಾಖೆ ಬೆಂಗಳೂರು
9) ರಾಜ್ಯ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
10) ಎಲ್ಲಾ ಇಲಾಖಾ ಉಪ : ಅಧೀನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರದ ಸಚಿವಾಲಯ
11) ಆರ್ಥಿಕ ಇಲಾಖೆಯ, ಎಲ್ಲಾ ಶಾಖಾಧಿಕಾರಿಗಳು
12) ರಾಜ್ಯದ ಎಲ್ಲಾ ಖಜಾನೆ ಅಧಿಕಾರಿಗಳು (ಖಜಾನೆ ನಿರ್ದೇಶಕರ ಮೂಲಕ) ಶಾಖೆಯ ರಕ್ಷ ಕಡತ ಮತ್ತು ಹೆಚ್ಚಿನ ಪ್ರತಿಗಳು.
13) ವಾರಪತ್ರ/ಶಾಖೆಯ ರಕ್ಷಾ ಕಡತ.